**ಸಾಕ್ಷಿಯನ್ನು ದಿನಾಂಕ 04-08-2022 ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಶ್ರೀ ಎಲ್ ಎಸ್ ಕೆ ವಕೀಲರಿಂದಃ**

ನಾನು ಮತ್ತು 1 ನೇ ಆರೋಪಿಯು ಮೊದಲ ಬಾರಿಗೆ ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಬೇಟಿಯಾಗಿ, ಮಾತುಕತೆ ಮಾಡಿರುತ್ತೇವೆ ಎಂದರೆ ನಾನು ಮತ್ತು 1 ನೇ ಆರೋಪಿ ಕಾಲೇಜಿನಲ್ಲಿ ಸಹಪಾಟಿಗಳಾಗಿದ್ದು ನಾವು ಮೊದಲ ಬಾರಿಗೆ 2003 ರಲ್ಲಿ ಬೇಟಿಯಾಗಿದ್ದು, ಆರೋಪಿ ನನಗೆ ಮಾತನಾಡಿಸಲು ಬರುತ್ತಿದ್ದರು, ಆದರೆ ನಾನು ಅವರ ಜೊತೆ ಮಾತುಕತೆ ಮಾಡುತ್ತಿರಲಿಲ್ಲ. ನಾನು ಯಾವತ್ತೂ ಕೂಡ 1 ನೇ ಆರೋಪಿಯ ಜೊತೆ ಮಾತನಾಡಿರುವುದಿಲ್ಲವೇ ಎಂದರೆ 1 ನೇ ಆರೋಪಿಯು ನನಗೆ ಮದುವೆಯ ಪ್ರಸ್ತಾವನೆ ಮಾಡುತ್ತಿದ್ದು ಯಾವ ಯಾವ ಸಮಯದಲ್ಲಿ ಆ ರೀತಿ ಮದುವೆಯ ಪ್ರಸ್ತಾವನೆ ಮಾಡಿರುತ್ತಾರೆ ನಾನು ಆವಾಗಲೆಲ್ಲಾ ಅದನ್ನು ತಿರಸ್ಕರಿಸಿರುತ್ತೇನೆ, ಆ ರೀತಿ ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು 1 ನೇ ಆರೋಪಿ ನನಗೆ ಮದುವೆಯ ಪ್ರಸ್ತಾವನೆ ಮಾಡಿರುತ್ತಾರೆ ಮತ್ತು ನಾನು ಅದನ್ನು ತಿರಸ್ಕರಿಸಿರುತ್ತೇನೆಂದು ಅದನ್ನು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ಒಂದು ಕಾಲೇಜಿನಲ್ಲಿ ಯಾವುದೇ ಒಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯೊಂದಿಗೆ ಅಸಭ್ಯ ರೀತಿಯಲ್ಲಿ ನಡೆದುಕೊಂಡಾಗ ಆ ವಿದ್ಯಾರ್ಥಿನಿ ಆ ವಿದ್ಯಾರ್ಥಿ ಬಗ್ಗೆ ಕಾಲೇಜಿನ ಪ್ರಾಂಶುಪಾಲರಿಗೆ ಆ ಬಗ್ಗೆ ದೂರನ್ನು ನೀಡಿದಾಗ ಆ ರೀತಿ ಅಸಭ್ಯವಾಗಿ ನಡೆದುಕೊಂಡ ವಿದ್ಯಾರ್ಥಿ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲಾಗತ್ತದೆ ಎಂದರೆ ಸರಿ. ನಾನು ಹೇಳಿದ ಹಾಗೆ 1 ನೇ ಆರೋಪಿ ನನ್ನನ್ನು ಹಿಂಬಾಲಿಸುತ್ತಾ ಪದೇ ಪದೇ ನನಗೆ ಮದುವೆಯ ಪ್ರಸ್ತಾವನೆ ಮಾಡಿರುತ್ತಾರೆಂದು ಹೇಳುವ ಬಗ್ಗೆ ನಾನು ಯಾವತ್ತಾದರೂ ಕಾಲೇಜಿನ ಪ್ರಾಂಶುಪಾಲರಿಗೆ ಆ ಬಗ್ಗೆ ದೂರನ್ನು ನೀಡಿರುತ್ತೇನೆಯೇ ಎಂದರೆ ಆ ಬಗ್ಗೆ ನಾನು ದೂರನ್ನು ನೀಡಿರುವುದಿಲ್ಲ. (ನ್ಯಾಯಾಲಯದ ಟಿಪ್ಪಣಿ ಃ ಸಾಕ್ಷಿಯು ಮುಂದುವರೆದು ಆ ಬಗ್ಗೆ ಅವರು 1 ನೇ ಆರೋಪಿಯ ತಾಯಿ ಮತ್ತು ಸಹೋದರಿಯರಿಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.) ನಾನು ಪಿಯುಸಿಯಲ್ಲಿ ವ್ಯಾಸಾಂಗ ಮಾಡುತ್ತಿದ್ದಾಗ ನನಗೆ 1 ನೇ ಆರೋಪಿಯ ಕುಟುಂಬದವರ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ನನಗೆ 1 ನೇ ಆರೋಪಿ ಬಗ್ಗೆ ಪ್ರಾರಂಭದಲ್ಲಿ ಗೊತ್ತಿರಲಿಲ್ಲ, ತದ

ನಂತರದಲ್ಲಿ 1 ನೇ ಆರೋಪಿ ನನಗೆ ಮದುವೆ ಪ್ರಸ್ತಾಪನೆ ಮಾಡಿದ್ದು, ಆಗ 1 ನೇ ಆರೋಪಿಯ ಸಹೋದರಿ ಕಾಂಚನರವರು ನಾನು ಪಿಯುಸಿಯಲ್ಲಿ ವಿದ್ಯಾಬ್ಯಾಸ ಮಾಡುತ್ತಿದ್ದಾಗ ಅವರು ಅದೇ ಕಾಲೇಜಿನಲ್ಲಿ ಡಿಗ್ರಿಯಲ್ಲಿ ವ್ಯಾಸಾಂಗ ಮಾಡುತ್ತಿದ್ದಿದ್ದು ನನಗೆ ಗೊತ್ತಿರುತ್ತದೆ. (ನ್ಯಾಯಾಲಯದ ಟಿಪ್ಪಣಿ ಃ1 ನೇ ಆರೋಪಿ ಬಗ್ಗೆ ನನಗೆ ಆಸಕ್ತಿ ಇರಲಿಲ್ಲ ಹೀಗಾಗಿ ನಾನು 5 ನೇ ಆರೋಪಿ ಕಾಂಚನರವರ ಬಗ್ಗೆ ತಿಳಿದುಕೊಳ್ಳುವ ಪ್ರಶ್ನೆಯೇ ಉದಬವಿಸಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.) ಯಾವಾಗ ನನಗೆ 1 ನೇ ಆರೋಪಿಯ ಬಗ್ಗೆ ಆಸಕ್ತಿ ಮತ್ತು ಇಷ್ಟ ಇರಲಿಲ್ಲ ಎಂದ ಮೇಲೆ 1 ನೇ ಆರೋಪಿಯ ಕುಟುಂಬದ ಸದಸ್ಯರ ಬಗ್ಗೆಯಾಗಲಿ ಅಥವಾ ಅವರ ಕುಟುಂಬದ ಹಿನ್ನೆಲೆಯ ಬಗ್ಗೆಯಾಗಲೀ ನನಗೆ ತಿಳಿದುಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿ. ಅದೇ ರೀತಿ ನಾನು ಆ ಬಗ್ಗೆ ತಿಳಿದುಕೊಳ್ಳಲು ಇಷ್ಟಪಟ್ಟಿರಲಿಲ್ಲ ಮತ್ತು ಆ ಬಗ್ಗೆ ಯಾವ ಪ್ರಯತ್ನವೂ ಮಾಡಿರುವುದಿಲ್ಲ ಎಂದರೆ ಸರಿ. ನಾನು ದೂರಿನಲ್ಲಿ ನನಗೆ ಒಂದು ದಿನಕ್ಕೆ 400-600 ಕರೆಗಳು ನನ್ನ ಮೊಬೈಲ್ ಫೋನ್ ಗೆ ಬರುತ್ತಿದ್ದವು ಎಂದು ಹೇಳಿದ್ದು ಆ ರೀತಿ ನನಗೆ ಯಾವ ಮೊಬೈಲ್ ನಂಬರ್ ನಿಂದ ನನ್ನ ಯಾವ ಮೊಬೈಲ್ ನಂಬರ್‌ಗೆ ಕರೆಗಳು ಬರುತ್ತಿದ್ದವೆಂದು ನನಗೆ ಹೇಳಲು ಬರುತ್ತದೆಯೇ ಎಂದರೆ ನನಗೆ ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ನಾವು ಎಷ್ಟೇ ಮೊಬೈಲ್ ಸೆಟ್‌ಗಳನ್ನು ಬದಲಿಸಿದರೂ ಕೂಡ ಸಿಮ್ ಕಾರ್ಡ್ ಬದಲಿಸದಿದ್ದಲ್ಲಿ ನಮ್ಮ ಮೊಬೈಲ್ ನಂಬರ್ ಬದಲಾಗುವುದಿಲ್ಲ ಅದು ಒಂದೇ ಇರುತ್ತದೆ ಎಂದರೆ ಸರಿ. (ನ್ಯಾಯಾಲಯದ ಟಿಪ್ಪಣಿ ಃ ಸಾಕ್ಷಿಯು ಮುಂದುವರೆದು ಅವರು ತಮ್ಮ ಮೊಬೈಲ್ ನಂಬರನ್ನು ಹಲವಾರು ಬಾರಿ ಬದಲಾಯಿಸಿರುತ್ತಾರೆಂದು ನುಡಿಯುತ್ತಾರೆ.)

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸ. ಇ. ಎ. ಒ.

6 ನೇ ಅ. ಮು. ಮ. ದಂ. ನ್ಯಾ .